**<u>ಸಾಕ್ಷಿಯನ್ನು ದಿನಾಂಕ 11.12.2023 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 4 ರಿಂದ 9ನೇ ಪ್ರತಿವಾದಿಯರ ಪರ ಶ್ರೀ ಟಿ ಎನ್ ಎಸ್ ವಕೀಲರಿಂದಃ</u>**

ನನ್ನ ತಂದೆ 1 ನೇ ವಾದಿಗೆ ವಯಸ್ಸಾಗಿದೆ, 3 ನೇ ವಾದಿ ಸರ್ಕಾರಿ ನಕೌರರಾಗಿದ್ದು, ಉಳಿದ ವಾದಿಯರು ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲವೆಂದು ಹೇಳಿ ನನಗೆ ಎಸ್.ಪಿ.ಎ ಬರೆದುಕೊಟ್ಟಿದ್ದಾರೆ. 1 ಮತ್ತು 3 ನೇ ವಾದಿಯರನ್ನು ಹೊರತುಪಡಿಸಿ ಉಳಿದ ವಾದಿಯರು ಯಾವ ಕಾರಣಕ್ಕೆ ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲವೆಂದು ಎಸ್.ಪಿ.ಎ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದೇನೆಂದು ನನಗೆ ಗೊತ್ತಿಲ್ಲ.

2. ಈ ಹಿಂದೆ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದ 3 ನೇ ವಾದಿಗೆ ಈಗ 50 ವರ್ಷ ವಯಸ್ಸಾಗಿದೆ. 3 ನೇ ವಾದಿ ಕೋಲಾರದಲ್ಲಿ ಶಿಕ್ಷಕನಾಗಿದ್ದಾರೆ. 3 ನೇ ವಾದಿ ಕೋಲಾರದಲ್ಲಿಯೇ ವಾಸವಾಗಿದ್ದಾರೆ. 3 ನೇ ವಾದಿ ಈ ಹಿಂದೆ ಸಲ್ಲಿಸಿದ್ದ ತನ್ನಮುಖ್ಯ ವಿಚಾರಣೆಯನ್ನು ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ ಎಂಬ ಕಾರಣದಿಂದ ರದ್ದು ಪಡಿಸಿಕೊಂಡಿದ್ದಾರೆ. ನಾನು 10 ನೇ ತರಗತಿಯವರೆಗೆ ಕಲಿತಿದ್ದೇನೆ. ಈ ಕೇಸಿನಲ್ಲಿ ವಾದಿಗಳು ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ತಿಳಿಯುತ್ತದೆ ಎಂದು ನನ್ನ ಮೂಲಕ ಸುಳ್ಳು ಸಾಕ್ಷಿ ಹೇಳಿಸುತ್ತಿದ್ದಾರೆ ಎಂದರೆ ಸರಿಯಲ್ಲ.

3. ನಿಪಿ 2 ರಂತೆ 1 ನೇ ವಾದಿಯ ತಾತ ಚೆನ್ನಪ್ಪನವರ ಹೆಸರಿಗೆ ಬಂದ ಆಸ್ತಿಗಳಿಗೆ ಸಂಬಂಧಿಸಿದಂತೆ ಎರಡು ದಾವೆಗಳನ್ನು ಈ ನ್ಯಾಯಾಲಯದಲ್ಲಿ ದಾಖಲಿಸಿದ್ದೇವೆ. ಆ

ಇನ್ನೊಂದು ದಾವೆಯ ಸಂಖ್ಯೆ ಓ.ಎಸ್.136/2015 ಆಗಿರುತ್ತದೆ. ನಿಪಿ 2 ರ ಕ್ರಯಪತ್ರದ ಪ್ರಕಾರ ಆಸ್ತಿಗಳನ್ನು ಖರೀದಿಸಿದ ಚೆನ್ನಪ್ಪನವರಿಗೆ ನಾರಾಯಣಪ್ಪ ಮಗನಾಗಿರುತ್ತಾರೆ. ನಿಪಿ 2 ರ ಚೆನ್ನಪ್ಪ ಮತ್ತು ಆತನ ಸಹೋದರರು ವಿಭಾಗ ಮಾಡಿಕೊಂಡಿದ್ದಾರೆ. ನಿಪಿ 2 ಕ್ರಯಪತ್ರ ಆಗುವ ಮೊದಲನೇ ಚೆನ್ನಪ್ಪ ಮತ್ತು ಆತನ ಸಹೋದರರು ವಿಭಾಗ ಮಾಡಿಕೊಂಡಿದ್ದರು.

4. ನಿಪಿ 2 ರಂತೆ ಖರೀದಿಸಿರುವ ಆಸ್ತಿಗಳು ಚೆನ್ನಪ್ಪನಿಗೆ ಸೇರಿತ್ತು, ಆತನ ಮರಣದ ನಂತರ ಆತನ ಮಕ್ಕಳಿಗೆ ಆ ಆಸ್ತಿಗಳು ಸೇರಿವೆ ಎಂದರೆ ಸರಿ. ಚೆನ್ನಪ್ಪನ ಮಗನಾದ ನಾರಾಯಣಪ್ಪನ ಮಕ್ಕಳೇ ಈ ಕೇಸಿನ ವಾದಿಗಳು ಎಂದರೆ ಸರಿ. ನಾರಾಯಣಪ್ಪನ ದೊಡ್ಡಪ್ಪ ವೆಂಕಟಪ್ಪ. ವೆಂಕಟಪ್ಪನ ಮಕ್ಕಳು ಸೀತಪ್ಪ ಮತ್ತು ಮುನಿಯಪ್ಪ ಎಂದರೆ ಸರಿ.

5. ಪಾಪಣ್ಣನವರ ಮಗ ವೆಂಕಟರವಣಪ್ಪ ಮತ್ತು 4 ರಿಂದ 9 ನೇ ಪ್ರತಿವಾದಿಯರ ನಡುವೆ ಏನು ಸಂಬಂಧ ಇದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 03.11.1955 ರಂದು ಪಾಪಣ್ಣನವರ ಮಗ ವೆಂಕಟರವಣಪ್ಪನವರಿಗೆ ಚೆನ್ನಪ್ಪನ ಮಗ ನಾರಾಯಣಪ್ಪ ಮತ್ತು ಆತನ ದೊಡ್ಡಪ್ಪ ವೆಂಕಟಪ್ಪ ಮಕ್ಕಳಾದ ಸೀತಪ್ಪ, ಮುನಿಯಪ್ಪ ಮತ್ತು ತಿಮ್ಮಯ್ಯ ಮಾರಾಟ ಮಾಡಿದ ಕ್ರಯಪತ್ರವನ್ನು ನಾನು ನೋಡಿದ್ದೇನೆ. ಆ ಆಸ್ತಿ ಈ ಕೇಸಿನ ದಾವಾ ಐಟಂ.2 ಸ.ನಂ.4/10 ವಿಸ್ತೀರ್ಣ 1 ಎಕರೆ 3 ಗುಂಟೆ ಎಂದರೆ ಸರಿ.

6. ದಿನಾಂಕ 20.09.1954 ರಂದು ಪಾಪಣ್ಣನವರ ಮಗ ವೆಂಕಟಪ್ಪನವರಿಗೆ ಚೆನ್ನಪ್ಪನ ಮಗ ನಾರಾಯಣಪ್ಪ ಮತ್ತು ಆತನ ದೊಡ್ಡಪ್ಪ ವೆಂಕಟಪ್ಪ ಮಕ್ಕಳಾದ ಸೀತಪ್ಪ, ಮುನಿಯಪ್ಪ ಮತ್ತು ತಿಮ್ಮಯ್ಯರವರು ದಾವಾ ಐಟಂ.3 ಸ.ನಂ.4/8 ವಿಸ್ತೀರ್ಣ 3 ಎಕರೆ 14 ಗುಂಟೆ ಬರೆದುಕೊಟ್ಟಿರುವ ಕ್ರಯಪತ್ರವನ್ನು ನಾನು ನೋಡಿದ್ದೇನೆ. ಸ.ನಂ.4/8 ಪೋಡಿಯಾಗಿ ಸುಮಾರು ಸರ್ವೇ ನಂಬರ್ ಗಳಾಗಿವೆ. ಆ ಎರಡೂ ಕ್ರಯಪತ್ರಗಳನ್ನು ಈ ಕೇಸಿನ ವಾದಿಯರು ನನಗೆ ತೋರಿಸಿದ್ದರು, ನಾನು ಸಹ ನೋಡಿದ್ದೇನೆ.

7. ದಿನಾಂಕ 03.11.1955 ಮತ್ತು ದಿನಾಂಕ 20.09.1954 ರ ಎರಡೂ ಕ್ರಯಪತ್ರಗಳ ಬಗ್ಗೆ ವಾದಪತ್ರದಲ್ಲಿ ಯಾವ ಕಾರಣಕ್ಕೆ ವಾದಿಯರು ಹೇಳಿಲ್ಲ ಎಂದರೆ ಸಾಕ್ಷಿ ಆ ಎರಡೂ ಕ್ರಯಪತ್ರಗಳನ್ನು ವಕೀಲರಿಗೆ ನೀಡಲಾಗಿದೆ ಎಂದು ನುಡಿಯುತ್ತಾರೆ. ಈ ಕೇಸನ್ನು ದಾಖಲಿಸುವಾಗ ವಕೀಲರಿಗೆ ಮಾಹಿತಿಯನ್ನು ನೀಡಲು ನಾನು ಹೋಗಿಲ್ಲ. ಆ ಎರಡೂ ಕ್ರಯಪತ್ರಗಳ ಬಗ್ಗೆ ವಾದಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ. ವಕೀಲರು ವಾದಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಆ ಎರಡೂ ಕ್ರಯಪತ್ರಗಳ ವಿಚಾರಗಳನ್ನು ಹೇಳಿದ್ದಾರೆ.

8. ದಿನಾಂಕ 03.11.1955 ಮತ್ತು ದಿನಾಂಕ 20.09.1954 ರ ಕ್ರಯಪತ್ರಗಳು ಆದ ನಂತರ ವಾದಿಯರ ಕುಟುಂಬಕ್ಕೆ ದಾವಾ ಐಟಂ.ನಂ.2 ಮತ್ತು 3 ರ ಕಂದಾಯ ದಾಖಲೆಗಳು ಬಂದಿಲ್ಲ. ಈ ಕೇಸಿನಲ್ಲಿ ಹಾಜರುಪಡಿಸಿರುವ ನಿಪಿ 11 ರಿಂದ

82 ರ ದಾಖಲೆಗಳು ಪ್ರತಿವಾದಿ 4 ರಿಂದ 9 ಮತ್ತು ಅವರ ಹಿರಿಯರು ಮತ್ತು ಅವರುಗಳು ಖರೀದಿಸಿದವರ ಹೆಸರಿನಲ್ಲಿ ಇವೆ ಎಂದರೆ ಸರಿ.

9. ದಾವಾ ಐಟಂ.ನಂ.2 ಮತ್ತು 3 ನ್ನು ಮಾರಾಟ ಮಾಡಿದ ನಂತರವೂ ಯಾವ ಕಾರಣಕ್ಕೆ ಈ ದಾವೆಯನ್ನು ವಾದಿಯರು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಆ ಆಸ್ತಿಗಳು ನನ್ನ ಮುತ್ತಾತ ಚೆನ್ನಪ್ಪನವರ ಆಸ್ತಿಗಳಾಗಿರುವುದರಿಂದ ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ನಾರಾಯಣಪ್ಪ ನನ್ನ ತಾತ. ವೆಂಕಟಪ್ಪನವರು ನಮ್ಮ ಮುತ್ತಾತ ಚೆನ್ನಪ್ಪನವರ ಅಣ್ಣ. ದಿನಾಂಕ 03.11.1955 ಮತ್ತು ದಿನಾಂಕ 20.09.1954 ರ ಕ್ರಯಪತ್ರಗಳು ಸರಿ ಇಲ್ಲ ಎಂದು ಇದುವರೆಗೂ ಯಾವುದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿಲ್ಲ. ಆ ಕ್ರಯಪತ್ರಗಳಂತೆ ಖರೀದಿಸಿದವರ ಹೆಸರಿಗೆ ಆದ ಕಂದಾಯ ದಾಖಲೆಗಳು ಸರಿ ಇಲ್ಲ ಎಂದು ಯಾವುದೇ ದಾವೆ ಸಲ್ಲಿಸಿಲ್ಲ.

10. ದಾವಾ ಐಟಂ.2 ಮತ್ತು 3 ಕ್ಕೆ ಸಂಬಂಧಿಸಿದಂತೆ ಆ ಎರಡೂ ಕ್ರಯಪತ್ರಗಳು ಆದ ನಂತರ ಆ ಆಸ್ತಿಗಳಿಗೆ ಕಂದಾಯವನ್ನು ನಮ್ಮ ಕುಟುಂಬದವರು ಪಾವತಿಸಿಲ್ಲ. ದಿನಾಂಕ 03.11.1955 ಮತ್ತು ದಿನಾಂಕ 20.09.1954 ರ ಕ್ರಯಪತ್ರಗಳ ಅಡಿಯಲ್ಲಿ ಖರೀದಿಸಿರುವ ವೆಂಕಟರವಣಪ್ಪನವರಿಗೆ ಚಿಕ್ಕನಾರಾಯಣಪ್ಪ ಮತ್ತು ವೆಂಕಟಸ್ವಾಮಿ ಮಕ್ಕಳು ಎಂದರೆ ಸರಿ. ಚಿಕ್ಕನಾರಾಯಣಪ್ಪ ಮತ್ತು ವೆಂಕಟಸ್ವಾಮಿ 1968 ರಲ್ಲಿ ಮುಜುಬಾನೆ ವಿಭಾಗ ಪತ್ರದ ಪ್ರಕಾರ ದಾವಾ ಐಟಂ.2 ಮತ್ತು 3 ನ್ನು ಅರ್ಧ ಅರ್ಧ ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ.

11. ಚಿಕ್ಕನಾರಾಯಣಪ್ಪ ಮತ್ತು ವೆಂಕಟಸ್ವಾಮಿ ಮುಜುಬಾನೆ ವಿಭಾಗ ಪತ್ರ ಮಾಡಿಕೊಂಡ ನಂತರ ದಾವಾ ಐಟಂ.3 ರಲ್ಲಿ 1300 ಚದರಡಿಯಲ್ಲಿ 12 ಸೈಟುಗಳನ್ನು ಮಾಡಿ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ಸಾಕ್ಷಿ ಸ್ವತಃ ಮಾರಾಟ ಮಾಡಿರುವುದು ಪೋರ್ಜರಿ, ಪೋಡಿಗಳಾಗಿರುವುದು ಪೋರ್ಜರಿ ಎಂದು ನುಡಿಯುತ್ತಾರೆ. ಆ 12 ಸೈಟುಗಳನ್ನು ಖರೀದಿಸುವವರನ್ನೂ ಸಹ ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿದ್ದೇವೆ ಮತ್ತು ಆ ಕ್ರಯಪತ್ರಗಳನ್ನು ಸಹ ಹಾಜರುಪಡಿಸಿದ್ದೇವೆ ಎಂದರೆ ನಿಜ. ಆ ಕ್ರಯಪತ್ರಗಳು ಪೋರ್ಜರಿ ಎಂದು ವಾದ ಪತ್ರದಲ್ಲಿ ಬರೆಸಿಲ್ಲ. ಕ್ರಯಪತ್ರಗಳು ಮತ್ತು ಪಹಣಿಗಳು ಪೋರ್ಜರಿ ಆಗಿವೆ. ಪೋರ್ಜರಿ ಎಂದರೆ ಏನು ಎಂದರೆ ಸಾಕ್ಷಿ ಬೇರ ಜಮೀನುಗಳಲ್ಲಿ ಕರಾರು ಮಾಡಿಕೊಂಡು ಪಹಣಿಗಳನ್ನು ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

12. 12 ಸೈಟುಗಳನ್ನು ಖರೀದಿಸಿರುವವರ ಕ್ರಯಪತ್ರಗಳನ್ನು ನಾನು ನೋಡಿಲ್ಲ. ಆ ಕ್ರಯಪತ್ರಗಳಲ್ಲಿ ಮಾರಾಟ ಮಾಡುವವರಿಗೆ ಯಾವ ಆದಾರದಲ್ಲಿ ಅವರಿಗೆ ಆ ಆಸ್ತಿ ಬಂದಿದೆ ಎಂದು ಬರೆದಿದೆ ಎಂದು ನಾನು ನೋಡಿಲ್ಲ. ದಿನಾಂಕ 03.11.1955 ಮತ್ತು ದಿನಾಂಕ 20.09.1954 ರ ಕ್ರಯಪತ್ರ ಆದ ನಂತರ ನಾರಾಯಣಪ್ಪನವರು 2004 ರವರೆಗೂ ಬದುಕಿದ್ದರು. ವೆಂಕಟಪ್ಪನವರ ಮಕ್ಕಳು ಎಷ್ಟು ವರ್ಷದವರೆಗೂ ಬದುಕಿದ್ದರು ಎಂದು ನನಗೆ ಗೊತ್ತಿಲ್ಲ. ವೆಂಕಟಪ್ಪನವರ ಮಕ್ಕಳು ಈಗ ಬದುಕಿಲ್ಲ, ಅವರು ಮೊಮ್ಮಕ್ಕಳು ಈಗ ಬದುಕಿದ್ದಾರೆ. ವೆಂಕಟಪ್ಪನವರ ಮೊಮ್ಮಕ್ಕಳನು ಈ ಕೇಸಿನಲ್ಲಿ ಸೇರಿಸಿಲ್ಲ.

13. 4 ರಿಂದ 6 ನೇ ಪ್ರತಿವಾದಿಯರು ವೆಂಕಟರವಣಪ್ಪ ನವರ ದೊಡ್ಡಮಗ ಚಿಕ್ಕನಾರಾಯಣಪ್ಪನ ಮಕ್ಕಳು ಎಂದರೆ ನಿಜ. 7 ಮತ್ತು 8 ನೇ ಪ್ರತಿವಾದಿಯರು ವೆಂಕಟರವಣಪ್ಪನವರ ಚಿಕ್ಕಮಗ ವೆಂಕಟಸ್ವಾಮಿನವರ ಮಕ್ಕಳು ಎಂದರೆ ನಿಜ. 9 ನೇ ಪ್ರತಿವಾದಿ ಸದರಿ ವೆಂಕಟಸ್ವಾಮಿ ರವರ ಹೆಂಡತಿ ಎಂದರೆ ನಿಜ. 9 ನೇ ಪ್ರತಿವಾದಿ ದಿನಾಂಕ 25.11.2023 ರಂದು ತೀರಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಕೋರಿದ್ದರಿಂದ, ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ.